

ಯಾರಿಗಾದರೂ ಕೊಡೋದಾದರೆ ಕೊಡಬಹುದು..' 'ಹೌದೌದು, ನಮ್ಮ ರತ್ನ ಹೋದಾಗಲೂ ಅವಳ ಮಗ ಪಾಪ ಒಳ್ಳೆ ಸೀರೆಗಳನ್ನೆಲ್ಲ ನಮಗೆಲ್ಲ ಕೊಟ್ಟಿದ್ದ...'

ಬೀರು ತೆಗೆದು ಎಲ್ಲಾ ಈಗಲೇ ತೊಗೊಂಡು ಹೋಗಿ ಎನ್ನಲಾ ಎಂದು ಯೋಚಿಸಲು ಶುರು ಮಾಡಿದಳು ಜಾನು. ಜಾನು ಸೀರೆ ತಂದಾಗಲೆಲ್ಲ ಪದ್ದಮ್ಮನಿಗೂ ತರುತ್ತಿದ್ದಳು. ಎಲ್ಲಾದರೂ ಸೀರೆ ಎಕ್ಸಿಬಿಷನ್ ಇದ್ದಾಗ ಪದ್ದಮ್ಮನಿಗೆ ಹೋಗಲೇ ಬೇಕಿತ್ತು. ಎರಡೆರಡು ಬೀರು ತುಂಬ ತುಂಬಿದ್ದರೂ, ಹೊಸ ಸೀರೆ ಎಂದ ಕೂಡಲೇ ಪದ್ದಮ್ಮನಿಗೆ ಆಸೆ ಹುಟ್ಟುತ್ತಿತ್ತು. ಇಂದು ಇವರೆಲ್ಲ ಸೀರೆ ಬಗ್ಗೆ ಮಾತಾಡುವಾಗಲೂ ಪದ್ದಮ್ಮ ಮಾತಾಡುತ್ತಿಲ್ಲ ಎನ್ನುವುದು ಅವಳಿಗೆ ಇನ್ನಷ್ಟು ಸಂಕಟ ಶುರುವಾಯಿತು.

ಎಲ್ಲರೂ ಸುಮ್ಮನಿರಿ ಎಂದು ಕೂಗಿ ಹೇಳಬೇಕೆನಿಸುತ್ತಿತ್ತು. ಇನ್ನೇನು, ಇನ್ನೊಂದೆರಡು ಗಂಟೆಗೆ ಬೆಳಕು ಹರಿಯುತ್ತದೆ, ಮಾತು ಯಾಕೆ ಎಂದುಕೊಂಡು ಸುಮ್ಮನಾದಳು.

ರೂಮಿನಿಂದ ಶಂಕರಪ್ಪ ಮೆತ್ತಗೆ ಕುಸುಮಾಳಿಗೆ ಅಮ್ಮನ ಮೈಮೇಲೆ ಚಿನ್ನ ಇದ್ದರೆ ತೆಗೆದುಬಿಡಮ್ಮಾ, ನಾಳೆಗೆ ತೆಗೆಯೋಕಾಗಲ್ಲ ಎಂದ.

'ಎಲ್ಲಾ ಆಸ್ಪತ್ರೆಲೇ ತೆಗೆದು ಕೊಟ್ಟಾಗಿದೆ ಬಿಡಿ, ಇನ್ನೇನೂ ಉಳ್ಕೊಂಡಿಲ್ಲ ಅಲ್ಲಿ ಮೂಗುತಿ ಒಂದಿದೆ, ಅದು ತೊಗೊಳ್ತೀರಾ ನೋಡಿ' ಜಾನು ಸಿಡುಕಿದಳು.

'ಮೂಗುತಿನೆಲ್ಲ ಯಾರೂ ತೆಗೆಯೋದಿಲ್ಲ, ಸುಮ್ನಿರಪ್ಪ ನೀನು' ಕುಸುಮಾ ರೇಗಿದಳು. ಶಂಕರಪ್ಪ ಸುಮ್ಮನಾದ. 'ಪದ್ದಮ್ಮನ ಮುಖವನ್ನು ಬೊಗಸೆಯಲ್ಲಿ ಹಿಡಿದು ಇದಾದರೂ ಯಾರಿಗೂ ಕೊಡಬೇಡಿ ಅಮ್ಮ' ಎಂದು ಪಿಸುಗುಟ್ಟಿದಳು ಜಾನು.

'ಅಮ್ಮ ನಿನಗೆ ಒಂದು ಜೊತೆ ಓಲೆ ಕೊಡೋಕೆ ಹೇಳಿದ್ದರು' ಕುಸುಮಾ ಮೆತ್ತಗೆ ಹೇಳಿದಳು.

'ಈಗ್ಯಾಕೆ ಅದು, ಬಿಡು' ಎಂದು ಗೊಣಗಿದಳು ಜಾನು.

ಮತ್ತೆ ಮಾತುಗಳು ಶುರುವಾದವು...

'ಪದ್ದಿ ಹತ್ರ ಚಿನ್ನ ತುಂಬಾ ಇದ್ದ ಹಾಗಿರಲಿಲ್ಲ ಅಲ್ವಾ'

'ಗೊತ್ತಿಲ್ಲ, ಸರ, ಬಳೆ, ಓಲೆ ಎಲ್ಲ ಇತ್ತಲ್ಲ..'

'ಹ್ಞೂ, ಅಮ್ಮನ ಅವಲಕ್ಕಿ ಸರವೂ ಇತ್ತು. ಒಂದೆರಡು ಜೊತೆ ಓಲೆನೂ ಮಾಡಿಸ್ಕೊಂಡಿದ್ದಳು ಅನ್ಸತ್ತೆ.'

'ಈಗೇನು ಮಾಡ್ತಾರೋ...'

'ಏನು ಮಾಡೋದು? ಅಮ್ಮನ ಚಿನ್ನ ಮಗಳು ತೊಗೊಳ್ತಾಳೆ ಅಷ್ಟೇ, ಅಲ್ವಾ ಕುಸುಮಾ?'

'ಅದು ಹೇಗಾಗತ್ತೆ? ಸೊಸೆ ಇಲ್ವಾ, ಅವಳಿಗೂ ಕೊಡಬೇಕು'

'ಹ್ಞೂ, ನೀನು ಬಿಡಬೇಡ ಜಾನು, ನಿನ್ನ ಪಾಲಿಂದು ತೊಗೊ'

'ಅಯ್ಯೋ ಇದೊಳ್ಳೆ ಕಥೆ, ಮಗಳು ಬಿಟ್ಟದ್ದೋ, ಅಥವಾ ನೆನಪಿಗೆ ಒಂದು ತೊಗೊಬೇಕು ಸೊಸೆ, ಪಾಲು ಯಾಕಾಗತ್ತೆ?'

'ಯಾಕೆ, ಜಾನು ಏನು ನೋಡ್ಕೊಂಡಿಲ್ವಾ, ಅವಳಿಗೂ ಚಿನ್ನದಲ್ಲಿ ಪಾಲು ಬೇಕೇ ಬೇಕು'

'...'

ಜಾನು ಹೊರಗೆ ಓಡಿ ಬಂದು ಬಳಬಳನೆ ವಾಂತಿ ಮಾಡಲಾರಂಭಿಸಿದಳು. ಸೂರ್ಯ ಗಾಬರಿಯಾಗಿ, 'ಏನಾಯ್ತು ಏನಾಯ್ತು, ಪಿತ್ತ ಆಗಿರಬೇಕು, ನೀನಂತೂ ನಿನ್ನೆಯಿಂದ ನೆಟ್ಟಗೆ ನೀರೂ ಕುಡಿದಿಲ್ಲ, ಒಂದೆರಡು ನಿಮಿಷ ಸುಧಾರಿಸ್ಕೋ, ಏನಾದರೂ ತಿನ್ನುವಂತೆ' ಎಂದ. ಸುಸ್ತಾಗಿ ಒಂದೆರಡು ಹನಿ ನೀರು ಕುಡಿದು ಸೂರ್ಯನ ಭುಜಕ್ಕೆ ಒರಗಿ ಕೂತವಳು ಇದ್ದಕ್ಕಿದ್ದಂತೆ ಎದ್ದು, 'ಅಮ್ಮನನ್ನು ಒಬ್ಬರೇ ಬಿಟ್ಟು ಬಂದು ಇಲ್ಲಿ ಕೂತಿದೀಯಲ್ಲ, ಅವರಿಗೆ ಕತ್ತಲೆ ಅಂದರೆ ಭಯ ಅಂತ ಗೊತ್ತಿಲ್ವಾ ನಿಂಗೆ' ಎಂದು ಜೋರಾಗಿ ಅಳಲಾರಂಭಿಸಿದಳು.

ಸೂರ್ಯ ನಿಧಾನಕ್ಕೆ ಜಾನುವನ್ನೂ ಕರೆದುಕೊಂಡು ಒಳಗೆ ಬಂದ.

ಪದ್ದಮ್ಮನ ಹತ್ತಿರವೂ ಬರದೇ ಕುಳಿತ ಬಂಧುಗಳು ಮೌನವಾದರು, ತನ್ನನ್ನಾದರೂ ಪದ್ದಮ್ಮನ ಜೊತೆಗೆ ಬಿಟ್ಟು ಬಿಡಿ ಎಂದು ಹೆದರಿ ಕುಳಿತ ಮೂಗುತಿ ಜಾನುವನ್ನು ನೋಡಿ ತುಸು ಧೈರ್ಯದಿಂದ ಹೊಳೆಯಲಾರಂಭಿಸಿತು. ●